1. ಬೂಚಿ ಬಂದಿದೆ,

ರಂಗ ಬೂಚಿ ಬಂದಿದೆ ||ಪ||

ಚಾಚಿ ಕುಡಿದು ಸುಮ್ಮನೆ

ನೀ ಪಾಚಿಕೊಳ್ಳೊ ಕೃಷ್ಣಯ್ಯ ||ಅ||

ನಾಲ್ಕು ಮುಖದ ಬೂಚಿಯೊಂದು

ಗೋಕುಲಕ್ಕೆ ಓಡಿ ಬಂದು

ಲೋಕರನ್ನು ಎಳೆದುಕೊಂಡು

ಕಾಕು ಮಾಡಿ ಒಯ್ಯುವುದಕೆ ||

ಮೂರು ಕಣ್ಣಿನ ಬೂಚಿಯೊಂದು
ಊರೂರ ಸುತ್ತಿ ಬಂದು  ದ್ವಾರದಲ್ಲಿ
ನಿಂತಿದೆ ನೋಡೊ  ಪೋರರನ್ನು
ಒಯ್ಯುವುದಕೆ ||

ಅಂಗವೆಲ್ಲ ಕಂಗಳುಳ್ಳ |ಶೃಂಗಾರ ಮುಖದ
ಬೂಚಿ| ಬಂಗಾರದಂಥ ಮಕ್ಕಳನೆಲ್ಲ
ಕಂಗೆಡಿಸಿ ಒಯ್ಯುವುದಕೆ ||

ಆರು ಮುಖದ ಬೂಚಿಯೊಂದು|ಈರಾರು
ಕಂಗಳದಕೆ |ವಾರು ವಾರು ಅಳುವ ಮಕ್ಕಳ
|ದೂರ ಸೆಳೆದು ಒಯ್ಯುವುದಕೆ ||

ಮರದ ಮೇಲೆ ಇರುವುದೊಂದು| ಕರಾಳ
ಮುಖದ ಬೂಚಿ| ತರಳರನ್ನು
ಎಳೆದುಕೊಂಡು|
ಪುರಂದರವಿಠಲಗೊಪ್ಪಿಸಲಿಕೆ ||

2. ಜೀಕೋಣ ಬನ್ನಿ ಜೋಕಾಲಿ

ಜೀವನದ ಅಮರ ಜೋಕಾಲಿ||

ಸಂತಸದಿ ಚಿಂತೆಯನು ನೀಗಿ

ಅಂತರವ ತೊರೆದು ಒಂದಾಗಿ|

ಕಡಲಿನಲಿ ಕುಣಿವ ಅಲೆಯಾಗಿ

ತಡೆಯದಲೇ ನಾವು ಒಂದಾಗಿ||೧||

ಬೀಳುವೆವು ಎಂಬ ಭಯವೇಕೆ

ಬಳಲಿಕೆಯ ಸುಳಿವು ನಮಗೇಕೆ|

ಬಿರುಗಾಳಿಯಲ್ಲಿ ತೋಗೋಣ

ಮಳೆ ಬಿಲ್ಲಿನಂತೆ ಮಣಿಯೋಣ||೨||

ಬಡತನದ ಗಿಡವ ಕಡಿಯೋಣ

ಅಡೆತಡೆಯ ತೊಡಕು ಬಿಡಿಸೋಣ||

ಬಿಡುಗಡೆಯ ಹಾಡು ಹಾಡೋಣ

ಕಡೆತನಕ ತೂಗಿ ನಲಿಯೋಣ||೩||

3. ರಚನೆ : ಡಾ|| ಎಚ್. ಎಸ್. ವೆಂಕಟೇಶಮೂರ್ತಿ.

ಝುಕ್ಕಣಕ್ಕ ಝುಕ್ಕಣಕ್ಕ ಝುಕ್ಕಣಕ್ಕ ಜೈ
ದೊಡ್ಡಣ್ಣೋರು ಕುಣೀತಿದ್ರು ಥಕ ಧಿನ್ನ ಧಿನ್ನ ಥೈ||

ಕುಣೀತಿದ್ರೆ ದೊಡ್ಡಣ್ಣೋರು
ಹೊತ್ತುಕೊಂಡು ಮೈ
ಇಟ್ಟೇಬಿಟ್ರು ಪುಟ್ಟಪ್ನೋರು ನೆತ್ತಿ ಮೇಲೆ ಕೈ ||

ದಾರಿಲಾಗ ಬರ್ತಾ ಇದ್ರು ಅಡಕೇ ಮಂಡಿ ಪೈ|ಮಾಡಿಕೊಳ್ತಾ ಎನೋ ಲೆಕ್ಕ
ಜೇಬಲ್ಲಿತ್ತು ಕೈ
ದೊಡ್ಡಣ್ಣೋರು ಢಿಕ್ಕೀ ಕೊಟ್ರು ಬಿದ್ದೇ ಬಿಟ್ರು ಪೈ|
ಮಂಡೇ ಒಡದ್ರೂ ಜೇಬಲ್ಲಿತ್ತು ಪೈ
ಸಮೇತ ಕೈ||೧||

ದೊಡ್ಡಣ್ಣೋರು ಪೈ ಮಾವನ್ನ ನೋಡ್ತಾ
ಅಂದ್ರು ಹೊಯ್| ಒಬ್ರೇ ಹೀಗೆ
ಬೀಳ್ಸಬಹುಬೇನೋ ಹಿಡೀರಿ ನನ್ನ ಕೈ||
ಎತ್ತೋವಾಗ ಕೂಗ್ತಾ ಇದ್ರು
ಹನುಮಣ್ಣೋರ್ಗೆ ಜೈ
ಆಕಡೆಗವ್ರು ಈ ಕಡೆಗಿವ್ರು ಹೇಳ್ತಾ ಇದ್ರು ಬೈ||೩||

4.ಸೇವಂತಿಗೆ ಚೆಂಡಿನಂಥ ಮುದ್ದು ಕೋಳಿ
ತಾಯಿ ಮಡಿಲಿನಲಿ ಬೀಡು ಬಿಟ್ಟ ಮುದ್ದು ಕೋಳಿ ||

ಅಮ್ಮನಿತ್ತದೀ ಅಮೃತ ಎನುವ ಕೋಳಿ
ಅಮ್ಮನಿತ್ತದೀ ಅಮೃತ ಎನುವ ಕೋಳಿ
ಒಳ್ಳೆ ನಲ್ಮೆಯಿಂದ ಬೆಳೆದು ಬಂದ ಮುದ್ದು ಕೋಳಿ ||

ತಾಯಿ ತೊರೆದು ಘಳಿಗೆ ಕೂಡ ಅಗಲಲಾರದು
ತನ್ನ ಸೋದರರ ಮರೆತು ಬಿಟ್ಟು ಮೆರೆಯಲಾರದು ||

ಜಾಣ ಮರಿ ಮುದ್ದು ಕೋಳಿ ಮಾತನಾಡದು
ತನ್ನ ಸಾಕಿದವರ ಬಿಟ್ಟು ದೂರ ಓಡಿ ಹೋಗದು ||

ಪ್ರೇಮವಿರುವ ಮನೆಯದುವೆ ನಿತ್ಯ ಸುಂದರ
ಆ ಪ್ರೇಮಭರಿತ ಹೃದಯವದು ದೇವ ಮಂದಿರ ||

ದೇವನವನೆ ಪ್ರೇಮರೂಪ ದಯಾಸಾಗರ
ಆ ದೈವರಕ್ಷೆ ಕಾವುದೆಲ್ಲ ಪ್ರೇಮಜೀವರ